

ಜೀವನದ ಜಂಜಾಟಗಳ ನಡುವೆಯೂ ಆತ್ಮವಿಶ್ವಾಸದ ದೀಪ ಹಚ್ಚಿದಂತಿದೆ ಈ ಚಿತ್ರ. ತೊಳೆಯಲು ಸಿದ್ಧವಾಗಿರುವ ಪಾತ್ರೆ, ಕೆಲಸದಲ್ಲಿ ತಲ್ಲೀನರಾಗಿರುವ ಮಹಿಳೆ ಮತ್ತೆ ವಿಧಿಯೇ ಕಣ್ತೆರೆದು ನೋಡುತ್ತಿದೆಯೇನೋ ಎಂಬಂತೆ ಬೃಹತ್ತಾಗಿರುವ ಚಿತ್ರ. ಅದೇನೇ ಇರಲಿ, ಎತ್ತರದ ಆರವಟ್ಟಿಗೆ ಏರಿ ಮಾತಿನ ಸಾಗರದಲ್ಲಿ ಮುಳುಗಿರುವ ಮಹಿಳೆಯರಿಬ್ಬರು ಬದುಕನ್ನು ಕಟ್ಟಿಕೊಳ್ಳುವ ವಿಶ್ವಾಸವನ್ನು ಕಂಗಳಲ್ಲಿ ತುಂಬಿಕೊಂಡಿದ್ದಾರೆ. ಅದಕ್ಕೆ ಪ್ರೋತ್ಸಾಹವೆಂಬಂತೆ ಗೋಡೆ, ಇಟ್ಟಿಗೆಗಳು ಬಣ್ಣವನ್ನು ಹೊದ್ದುಕೊಂಡು ನಾಳೆಗಾಗಿ ಕಾಯುತ್ತಿವೆ ಏಣಿಯ ಜೊತೆಗೆ. ಈ ಚಿತ್ರವನ್ನು ನೋಡಿದಾಗ ನಿಮಗೆ ಕವಿತೆಯ ಸಾಲುಗಳು ಹೊಳೆದವೇ? ಹಾಗಿದ್ದರೆ ನಿಮ್ಮ ಕವಿತೆಯನ್ನು ಬರೆದು ನಮಗೆ ಕಳುಹಿಸಿ. ನಿಮ್ಮ ಕಲ್ಪನೆಯ ಕವಿತೆ ಫೆಬ್ರುವರಿ 15ರ ಒಳಗೆ ನಮಗೆ ತಲುಪಬೇಕು.

ಚಿತ್ರ: ಏಜೆನ್ಸೀಸ್

---

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in